## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಸಿಡಿ\1678\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 14/07/2017

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಬೆಂಗಳೂರು ನಗರ ಜಿಲ್ಲೆ ವಿಕಾಸ ಸೌಧ ನಗರಾಭಿವೃದ್ಧಿ ಇಲಾಖೆ ಸಚಿವಾಲಯದ ಅಧೀನ ಕಾರ್ಯದರ್ಶಿ-ಆಗಿದ್ದ ಶ್ರೀ.ಎನ್.ಗೋಪಾಲಯ್ಯ (ಪ್ರಸ್ತುತ ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಬೆಂಗಳೂರು ನಗರ ಜಿಲ್ಲೆ ರಾಜಾಜಿನಗರ ಎಸ್‌ಎಸ್‌ಐ ಪ್ರದೇಶ 5ನೇ ಕ್ರಾಸ್ ನಂ.70ರ ನಿವಾಸಿಯಾದ ಶ್ರೀ.ಆಕಾಶ್ ರಂಕಾ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ದೂರಿನಲ್ಲಿ ಬೆಂಗಳೂರು ನಗರ ಜಿಲ್ಲೆ ವಿಕಾಸ ಸೌಧ ನಗರಾಭಿವೃದ್ಧಿ ಇಲಾಖೆ ಸಚಿವಾಲಯದ ಅಧೀನ ಕಾರ್ಯದರ್ಶಿಯಾಗಿದ್ದ ಶ್ರೀ.ಎನ್.ಗೋಪಾಲಯ್ಯ (ಪ್ರಸ್ತುತ ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) [ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಬೆಂಗಳೂರು ಉತ್ತರ ತಾಲ್ಲೂಕ್ ಕಸಬಾ ಹೋಬಳಿ ಲಾಲ್‌ಬಾಗ್ ಸಿದ್ದಾಪುರ ಗ್ರಾಮದ ಸರ್ವೆ ನಂ.27/1, 28/4, 28/5 ಮತ್ತು 28/6ರ ಒಟ್ಟು 2 ಎಕರೆ 39.5 ಗುಂಟೆ (3 ಗುಂಟೆ ಖರಾಬ್ ಕಳೆದು) ಜಮೀನನ್ನು ಉಧ್ಯಾನವನ\ ಬಯಲು ಜಾಗಕ್ಕಾಗಿ ಆರ್‌ಎಂಪಿ 2015ರ ಮಾಸ್ಟರ್ ಪ್ಲಾನ್‌ನಂತೆ ಕಾಯ್ದಿರಿಸಲಾಗಿದೆ. ಸದರಿ ಜಮೀನುಗಳು ಅಭಿವೃದ್ಧಿಗಾಗಿ ಮತ್ತು ಭೂ ಸ್ವಾಧೀನದಿಂದ ವಿನಾಯಿತಿಯನ್ನು ಹೊಂದಿದ್ದು, ಈ ವಿಚಾರ ಎದುರುದಾರರಿಗೆ ಗೊತ್ತಿದ್ದರೂ ಸಹ ಉಧ್ಯಾನವನ\ ಬಯಲು ಜಾಗಕ್ಕಾಗಿ ಮೀಸಲಿಟ್ಟಿದ್ದ ಜಾಗವನ್ನು ವಸತಿ ಉದ್ದೇಶಕ್ಕಾಗಿ ಎದುರುದಾರರು ಕಾನೂನು ಬಾಹಿರವಾಗಿ

N. Ananda.

ಆದೇಶಿಸಿ, ಸರ್ಕಾರದ ಸುತ್ತೋಲೆ ಸಂ:ಹೆಚ್‌ಯುಡಿ 478 ಎಂಎನ್‌ಎಕ್ಸ್ 86 ದಿನಾಂಕ:01/01/1987ರ ಸರ್ಕಾರ ಸುತ್ತೋಲೆಯಲ್ಲಿ ಹೇಳಲಾದ ಅಂಶಗಳನ್ನು ಉಲ್ಲಂಘಿಸಿ, ಭೂ ಪರಿವರ್ತನೆ ಮಾಡಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಜಮೀನುಗಳಲ್ಲಿ ವಸತಿ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಸರ್ಕಾರದ ಹಂತದಲ್ಲಿ ಅನುಮೋದನೆ ಪಡೆಯಲಾಗಿದೆ. ನಗರಾಭಿವೃದ್ಧಿ ಅಪರ ಮುಖ್ಯ ಕಾರ್ಯದರ್ಶಿರವರು ಸದರಿ ಪ್ರಸ್ತಾವನೆಯನ್ನು ಅನುಮೋದಿಸಬಹುದಾಗಿದೆಯೆಂದು ಬರೆದು ಮುಖ್ಯ ಮಂತ್ರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಅದರಂತೆ, ಮುಖ್ಯಮಂತ್ರಿಗಳು ಸಹ ಅನುಮೋದನೆಯನ್ನು ನೀಡಿದ್ದಾರೆ. ಆ ನಂತರ, ವಿಷಯ ನಿರ್ವಾಹಕರು ಸರ್ಕಾರದ ಆದೇಶವನ್ನು ತಯಾರಿಸಿ ಅವಗಾಹನೆ ಹಾಗೂ ಆದೇಶಕ್ಕೆ ಮಂಡಿಸಿದ್ದು, ಆ ಸಂದರ್ಭದಲ್ಲಿ ಅಂದಿನ ಶಾಖಾಧಿಕಾರಿ, ತಾನು ಹಾಗೂ ಉಪ ಕಾರ್ಯದರ್ಶಿರವರು ಕ್ರಮವಾಗಿ ಸಹಿ ಮಾಡಿ ಅಪರ ಮುಖ್ಯ ಕಾರ್ಯದರ್ಶಿರವರಿಗೆ ಸಲ್ಲಿಸಿದ್ದಾರೆ. ಅಪರ ಮುಖ್ಯ ಕಾರ್ಯದರ್ಶಿರವರು ಅನುಮೋದಿಸಿದ ಆದೇಶದ ಪ್ರತಿಗಳಿಗೆ ದಿ:18/11/16ರಂದು ಸಹಿ ಮಾಡಲಾಗಿದೆ. ಈ ಪ್ರಕರಣದಲ್ಲಿ ತಾನು ಉದ್ದೇಶಪೂರ್ವಕವಾಗಿ ಯಾವುದೇ ಆದೇಶವನ್ನು ಮಾಡಿಲ್ಲ, ತಾವು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿಲ್ಲ ಮತ್ತು ಯಾವುದೇ ತಪ್ಪು ಸಲಹೆ ನೀಡಿಲ್ಲ. ಮೇಲಾಧಿಕಾರಿಗಳ ಆದೇಶದಂತೆ ಕ್ರಮ ಕೈಗೊಂಡಿರುವುದಾಗಿ ಹೇಳಿದ್ದಾರೆ.

4. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಆಕ್ಷೇಪಣೆಗಳನ್ನು ಅಲ್ಲಗಳೆದು,. ದೂರಿನಲ್ಲಿನ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಬೆಂಗಳೂರು ಉತ್ತರ ತಾಲ್ಲೂಕ್ ಕಸಬಾ ಹೋಬಳಿ ಲಾಲ್‌ಬಾಗ್ ಸಿದ್ದಾಪುರ ಗ್ರಾಮದ ಸರ್ವೆ ನಂ.27/1, 28/4, 28/5 ಮತ್ತು 28/6ರ ಒಟ್ಟು 2 ಎಕರೆ 39.5 ಗುಂಟೆ (3 ಗುಂಟೆ ಖರಾಬ್ ಕಳೆದು)ರ ಜಮೀನನ್ನು ಉಧ್ಯಾನವನ\ ಬಯಲು ಜಾಗಕ್ಕಾಗಿ ಆರ್‌ಎಂಪಿ 2015ರ ಮಾಸ್ಟರ್ ಪ್ಲಾನ್‌ನಂತೆ ಕಾಯ್ದಿರಿಸಲಾಗಿದೆ. ಸದರಿ ಜಮೀನು ಮೂಲತಃ ಉಧ್ಯಾನವನ\ ಬಯಲು ಜಾಗಕ್ಕಾಗಿ ಕಾಯ್ದಿರಿಸಿದ್ದು, ಸದರಿ ಜಮೀನಿನಲ್ಲಿ 12089.88 ಚದರ ಮೀಟರ್ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು

N. Ananda

ಆರ್‌ಎಂಪಿ, 2015ರಂತೆ ಉಧ್ಯಾನವನ\ ಬಯಲು ಜಾಗ ಭೂ ಉಪಯೋಗದ ಬದಲಾಗಿ, ವಸತಿ ಉದ್ದೇಶಕ್ಕೆ ಎದುರುದಾರರು ಆದೇಶಿಸಿರುವುದು ಕಂಡು ಬಂದಿದೆ. ಆರ್‌ಎಂಪಿ, 2015ರ ಮಾಸ್ಟರ್ ಪ್ಲಾನ್ ಸರ್ಕಾರದ ಹಂತದಲ್ಲಿ ಉಧ್ಯಾನವನ ಎಂಬುದಾಗಿ ಅನುಮೋದನೆ ಮಾಡಲಾಗಿದೆ. ಎದುರುದಾರರ ಆಕ್ಷೇಪಣೆಯಲ್ಲಿ ದಿ:11/05/12ರಂದು ನಡೆದ ಸಮಿತಿ ಸಭೆಯ ವಿಷಯ ಸಂ.95/2012ರಲ್ಲಿ ಇದೇ ರೀತಿಯ ಇನ್ನೊಂದು ಪ್ರಕರಣಲ್ಲಿ ಆರ್‌ಎಂಪಿ 2015ರಲ್ಲಿ ಉಧ್ಯಾನವನ ಹಾಗೂ ಸಾರಿಗೆಯ ಅನುಕೂಲಕ್ಕಾಗಿ 9 ಎಕರೆ 14 ಗುಂಟೆ ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ, ಕಲಂ 1961ರ ಕಲಂ 69(2)ರಂತೆ ಸಾರ್ವಜನಿಕ ಉದ್ದೇಶದ ಪ್ರದೇಶವನ್ನು ಮಹಾ ಯೋಜನೆ ಅನುಮೋದನೆಯಾದ ದಿನಾಂಕದಿಂದ 5 ವರ್ಷದೊಳಗೆ ಭೂ ಸ್ವಾಧೀನ ಪಡಿಸಿಕೊಳ್ಳದಿದ್ದಲ್ಲಿ, ಅರ್ಜಿದಾರರು ಕೋರಿರುವ ಭೂ ಉಪಯೋಗವನ್ನು ನೀಡಬೇಕಾಗುತ್ತದೆಂದು ತಿಳಿಸಿದ್ದು, ಆರ್‌ಎಂಪಿ 2015 ದಿ:24/06/07ರಲ್ಲಿ ಅನುಮೋದನೆಯಾಗಿದ್ದು, 5 ವರ್ಷಗಳ ಅವಧಿ ದಿ:24/06/12ಕ್ಕೆ ಮುಗಿದಿದ್ದು, ಪ್ರಾಧಿಕಾರವು ಸದರಿ ಪ್ರದೇಶವನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿಲ್ಲದಿರುವುದನ್ನು ಗಮನಿಸಿ, ಭೂ ಉಪಯೋಗದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿರುವ ಮೇರೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅದರಂತೆ, ಸರ್ಕಾರವು ಸಹ ಅನುಮೋದನೆ ನೀಡಿದ್ದು, ಅದರಂತೆ ಆದೇಶ ನೀಡಿದೆ. ಆದರೆ, ಈ ಬಗ್ಗೆ ಸರ್ಕಾರ ಅನುಮೋದನೆ ನೀಡಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಜಮೀನು ಮೂಲತಃ ಉಧ್ಯಾನವನ\ ಬಯಲು ಜಾಗದ ಉಪಯೋಗಕ್ಕಾಗಿ ನಿಗಧಿಗೊಳಿಸಿದ್ದು, ಸದರಿ ಜಮೀನಿನಲ್ಲಿ ವಸತಿ ಉದ್ದೇಶಕ್ಕಾಗಿ ಎದುರುದಾರರು ಆದೇಶಿಸುವ ಸಂದರ್ಭದಲ್ಲಿ ಸರ್ಕಾರದ ಸುತ್ತೋಲೆ ಸಂ: ಹೆಚ್‌ಯುಡಿ 478 ಎಂಎನ್‌ಎಕ್ಸ್ 86 ದಿನಾಂಕ:01/01/1987ರನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಕಂಡು ಬಂದಿದೆ. ಸದರಿ ಸುತ್ತೋಲೆಯಲ್ಲಿ ಯಾವುದೇ ತೋಟಗಾರಿಕೆ ಉದ್ದೇಶಕ್ಕಾಗಿ ಮೀಸಲಿಟ್ಟ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ಪರಿವರ್ತನೆ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲವೆಂದು ತಿಳಿಸಲಾಗಿದೆ. ಆದರೆ, ಎದುರುದಾರರು ತಪ್ಪು ಮಾಹಿತಿ ಆಧಾರದ ಮೇಲೆ ಸದರಿ ಜಮೀನಿನಲ್ಲಿ ವಸತಿ ಉದ್ದೇಶಕ್ಕೆ ವರ್ಗಾವಣೆ ಮಾಡಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪು ಸಿವಿಲ್ ಅಪೀಲ್ ನಂ.10747/2013 ಶ್ರೀ.ಪುರುಷೋತ್ತಮ ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು ಯಾವುದೇ ಜಮೀನನ್ನು ಉಧ್ಯಾನವನ\ ಬಯಲು ಜಾಗಕ್ಕಾಗಿ ಮೀಸಲಿಟ್ಟಿದ್ದ ಪ್ರದೇಶವನ್ನು ಇತರೆ ಯಾವುದೇ ಉದ್ದೇಶಕ್ಕಾಗಿ ವರ್ಗಾವಣೆ ಮಾಡಲು ಅವಕಾಶವಿಲ್ಲವೆಂದು ತೀರ್ಪಿನಲ್ಲಿ ಚರ್ಚಿಸಲಾಗಿದೆ. ಆದರೆ, ಎದುರುದಾರರು ಸದರಿ ಜಮೀನಿನಲ್ಲಿ ಉಧ್ಯಾನವನ\ ಬಯಲು ಜಾಗಕ್ಕಾಗಿ ಮೀಸಲಿಟ್ಟಿದು, ಅದನ್ನು ಪರಿವರ್ತಿಸಬಾರದೆಂಬ ವಿಚಾರ ಗೊತ್ತಿದ್ದರೂ ಸಹ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ವಸತಿ ಉದ್ದೇಶಕ್ಕೆ ಅನುಮತಿ ನೀಡಿ ಆದೇಶ ಮಾಡಿರುವುದು ಕಂಡು ಬಂದಿದೆ. ಅದೇ ರೀತಿ, ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದ ನಿರ್ಣಿತ ತೀರ್ಪು ರಿಟ್ ಅರ್ಜಿ ಸಂ:21436/2005(ಬಿಡಿಎ) ಸಿ.ಎನ್.ಕುಮಾರ ವಿರುದ್ಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಪ್ರಕರಣದಲ್ಲಿ ಸರ್ಕಾರದ

N. Ananda.

6

ಸುತ್ತೋಲೆ ಸಂ:ಎನ್‌ಎಇ 361 ಬಿಎಎಂಎ 2013 ದಿನಾಂಕ:18/06/14ರಂತೆ ಯಾವುದೇ ಸ್ವತ್ತನ್ನು ಉಧ್ಯಾನವನ\ ಬಯಲು ಜಾಗಕ್ಕಾಗಿ ಮೀಸಲಿಟ್ಟಿದ್ದ ಪ್ರದೇಶವನ್ನು ಇತರೆ ಉದ್ದೇಶಕ್ಕಾಗಿ ಪರಿವರ್ತಿಸುವ ಅಧಿಕಾರ ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿ ರವರಿಗೆ ಇರುತ್ತದೆ ಎಂಬುದಾಗಿ ತೀರ್ಪಿನಲ್ಲಿ ಚರ್ಚಿಸಲಾಗಿದೆ. ಆದರೆ, ಎದುರುದಾರರು ಸದರಿ ಆದೇಶವನ್ನು ಮಾಡುವ ಸಂದರ್ಭದಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಹೇಳಲಾದ ಅಂಶಗಳನ್ನು ಪಾಲಿಸಿಲ್ಲ. ಅಲ್ಲದೇ, ಸದರಿ ಜಮೀನನ್ನು ನಿವೇಶನಕ್ಕೆ ಪರಿವರ್ತನೆ ಮಾಡುವ ಅಧಿಕಾರ ಎದುರುದಾರರಿಗೆ ಇಲ್ಲ, ಬದಲಾಗಿ ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿ ರವರಿಗೆ ಇದೆ. ಈ ಸುತ್ತೋಲೆಯಲ್ಲಿನ ಅಂಶಗಳನ್ನು ಸಹ ಎದುರುದಾರರು ಉಲ್ಲಂಘಿಸಿರುವುದು ಕಂಡು ಬಂದಿದೆ. ಆ ನಂತರ, ಶ್ರೀಮತಿ.ಪ್ರೀತಿ ರಾಂಕಾ ಮತ್ತು ಇತರರು ಸರ್ಕಾರದ ವಿರುದ್ಧ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರಲ್ಲಿ ರಿಟ್ ಅರ್ಜಿ ಸಂ:17446--17453/2015 (ಬಿಡಿಎ) ರಂತೆ ಸಲ್ಲಿಸಿದ್ದು, ನ್ಯಾಯಾಲಯವು ತಡಯಾಜ್ಞೆ ನೀಡಿದ್ದು, ಆ ನಂತರ ಸದರಿ ರಿಟ್ ಅರ್ಜಿಯು ವಜಾಗೊಂಡಿದೆ. ಅಂತಿಮವಾಗಿ, ಸರ್ಕಾರವು ಸರ್ಕಾರದ ಆದೇಶ ಸಂ:ನಅಇ 106 ಬೆಂಅಸೇ 2013 ಬೆಂಗಳೂರು ದಿ:12/03/15ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕ್ ಕಸಬಾ ಹೋಬಳಿ ಲಾಲ್‌ಬಾಗ್ ಸಿದ್ದಾಪುರ ಗ್ರಾಮದ ಸರ್ವೆ ನಂ.27/1, 28/4, 28/5 ಮತ್ತು 28/6ರ ಒಟ್ಟು 2 ಎಕರೆ 39.5 ಗುಂಟೆ (3 ಗುಂಟೆ ಖರಾಬ್ ಕಳೆದು) ಅಥವಾ 12089.88 ಚದರ ಮೀಟರ್ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಆರ್‌ಎಂಪಿ 2015ರಂತೆ ಉಧ್ಯಾನವನ\ ಬಯಲು ಜಾಗ ಭೂ ಉಪಯೋಗದ ಬದಲಾಗಿ ವಸತಿ ಉದ್ದೇಶಕ್ಕೆ ನಿಗಧಿಪಡಿಸಿ, ಸರ್ಕಾರದ ಅನುಮೋದನೆ ನೀಡಲಾಗಿದ್ದ, ಸರ್ಕಾರದ ಆದೇಶ ಸಂ:ನಅಇ 106 ಬೆಂಅಸೇ 2013 ಬೆಂಗಳೂರು ದಿ:18/11/14ನ್ನು ಹಿಂಪಡೆಯಲಾಗಿದೆ ಎಂಬುದಾಗಿ ಸುತ್ತೋಲೆ ಹೊರಡಿಸಿದ್ದಾರೆ. ಆದರೆ, ಎದುರುದಾರರು ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲ್ ಸಂ:10747/2013 ಮತ್ತು ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರ ರಿಟ್ ಅರ್ಜಿ ಸಂ:21436/2005ರಲ್ಲಿ ಹೇಳಲಾದ ಅಂಶಗಳನ್ನು ಉಲ್ಲಂಘಿಸಿ ಸದರಿ ಜಮೀನಿನಲ್ಲಿ ವಸತಿ ಉದ್ದೇಶಕ್ಕೆ ಅನುಮತಿ ನೀಡಿ ಪರಿವರ್ತನಾದೇಶ ಮಾಡಿರುವುದು ಕಂಡು ಬಂದಿದೆ. ಎದುರುದಾರರು ಸರ್ಕಾರದ ಸುತ್ತೋಲೆ ಸಂ: ಹೆಚ್‌ಯುಡಿ 478 ಎಂಎನ್‌ಎಕ್ಸ್ 86 ದಿ:01/01/1987ರಲ್ಲಿ ಹೇಳಲಾದ ಅಂಶಗಳು ಮತ್ತು ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯ ಮತ್ತು ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರ ನಿರ್ದೇಶನವನ್ನು ಸರಿಯಾದ ರೀತಿ ಪಾಲಿಸದೇ ಸದರಿ ಜಮೀನನ್ನು ಉದ್ಯಾನವನ\ ಬಯಲು ಜಾಗಕ್ಕಾಗಿ ಮೀಸಲಿಟ್ಟಿದ್ದ ಪ್ರದೇಶವನ್ನು ವಸತಿ ಉದ್ದೇಶಕ್ಕಾಗಿ ಅನುಮತಿ ನೀಡಿ ಆದೇಶಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಸದರಿಯವರೆಲ್ಲರ ಅಂದರೆ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 14/7

(ನ್ಯಾಯಾಮೂರ್ತಿ ಎನ್ ಆನಂದ)
ಉಪಲೋಕಾಯುಕ್ತರು–1,
ಕರ್ನಾಟಕ ರಾಜ್ಯ.

7